

ಯಾತ್ರೆ ಮಾಡಿದವನು ಮತ್ತು ತೀರ್ಥಯಾತ್ರೆಗಳನ್ನು ಮಾಡಲು ಹಲವರಿಗೆ ಸಹಾಯ ಮಾಡಿದವನು ಎನ್ನುವುದು ಅವನ ಹೆಗ್ಗಳಿಕೆ.

ಅವನಿಗಿದ್ದದ್ದು ಒಂದು ವಿಚಿತ್ರ ಹವ್ಯಾಸ ಮಾತ್ರ. ಪಾರಿವಾಳಗಳ ಸಾಕಣೆ, ಹುಂಜ ಕಾಳಗ ವೀಕ್ಷಣೆಯಂತಹ ವಿಚಿತ್ರ ಆಸಕ್ತಿಗಳನ್ನು ಕೆಲವು ಮತಿಗೆಟ್ಟವರು ಬೆಳೆಸಿಕೊಳ್ಳುತ್ತಾರೆ. ಇಂತಹ ಅಸಹ್ಯ ಆಟಗಳೆಂದರೆ ನವಾಬ್ ಸಾಬ್‌ನಿಗೆ ಇದ್ದದ್ದು ತಿರಸ್ಕಾರ ಮಾತ್ರ. ಅವನ ಮನೆಯ ಬಾಗಿಲು ತೆರೆದಿರುತಿದ್ದದ್ದು ವಿದ್ಯಾರ್ಥಿಗಳಿಗಾಗಿ—ಬೆಳ್ಳಗಿನ, ಸಪೂರ ಸೊಂಟದ ಹುಡುಗರ ಖರ್ಚುಗಳನ್ನೆಲ್ಲ ಅವನೇ ಭರಿಸುತ್ತಿದ್ದ.

ಬೇಗಂ ಜಾನ್‌ಳನ್ನು ಮದುವೆ ಮಾಡಿಕೊಂಡವನೇ, ತನ್ನ ಇನ್ನುಳಿದ ಸೊತ್ತುಗಳ ಜೊತೆ ಮನೆಯೊಳಗೆ ಕೂಡಿ ಹಾಕಿದವನು ಅವಳನ್ನು ಮರೆತೇಬಿಟ್ಟ.